**CW : 7**

PW : 7

**1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1067/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ. ಎಂ.ಬಿ. ಅಜಯ್ |
| ತಂದೆಯ ಹೆಸರು | : | ಎಂ.ಹೆಚ್ ಬಸವರಾಜ್ |
| ಪ್ರಾಯ | : | 40 ವರ್ಷ |
| ಉದ್ಯೋಗ | | ವೈದ್ಯಾಧಿಕಾರಿಗಳು, ಪುತ್ತೂರು ಸರ್ಕಾರಿ ಆಸ್ಪತ್ರೆ |
| ವಾಸಸ್ಥಳ | : | ಪುತ್ತೂರು |

ದಿನಾಂಕ:**09-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಕಳೆದ 10 ವರ್ಷಗಳಿಂದ ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01-06-2023 ರಂದು ನಾನು ಮಧ್ಯಾಹ್ನ 01.40 ರ ಸಮಯದಲ್ಲಿ ಪುತ್ತೂರು ಸರ್ಕಾರಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಕರ್ತವ್ಯದಲ್ಲಿ ಇದ್ದಾಗ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯ ಪಿ.ಸಿ. 485 ರವರು ಎ.ಕೆ. ಜಯರಾಮ ರೈ , ಜಯಂತ ಪೂಜಾರಿ ಮತ್ತು ಹನೀಫ್ ಕೆ.ಎಂ. ಎನ್ನುವವರನ್ನು ಚಿಕಿತ್ಸೆ ಯ ಸಂಬಂಧ ಹಲ್ಲೆಯ ಹಿನ್ನಲೆಯಲ್ಲಿ ಆದ ಗಾಯಗಳಿಗೆ ಕರೆದುಕೊಂಡು ಬಂದಿದ್ದರು.

ನಾನು ಅವರನ್ನು ವಿಚಾರಿಸಿದಾಗ ಅದೇ ದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಆತುಂಜ, ಕೆಯ್ಯೂರು ಗ್ರಾಮದಲ್ಲಿ ಕೈಯಿಂದ ಆರೀಸ್ ಎನ್ನುವವರು ಅವರಿಗೆ ಹಲ್ಲೆ ಮಾಡಿದ ಬಗ್ಗೆ ತಿಳಿಸಿದರು. ನಾನು ಎ.ಕೆ. ಜಯರಾಮ ರೈ ರವರನ್ನು ಮಧ್ಯಾಹ್ನ 01.40 ಕ್ಕೆ ಪರೀಕ್ಷಿಸಿದ್ದು ಅವರ ಎಡಗೈ ಹೆಬ್ಬೆರಳಿನ ಮೇಲೆ ಉಬ್ಬಿದ ರೀತಿಯ ಗಾಯ ಆಗಿರುವುದು ಕಂಡು ಬಂತು. ಅವರಿಗೆ ಆಗಿದ್ದ ಗಾಯ ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು.

ನಾನು ಜಯಂತ್ ಪೂಜಾರಿ ಅವರನ್ನು ಮಧ್ಯಾಹ್ನ 01.50 ಕ್ಕೆ ಪರೀಕ್ಷಿಸಿದ್ದು ಅವರಿಗೆ ಯಾವುದೇ ಗಾಯಗಳು ಆಗದಿಲ್ಲದಿದ್ದುದು ಕಂಡು ಬಂತು.

ನಾನು ಹನೀಫ್ ಕೆ.ಎನ್ ರವರನ್ನು ಪರೀಕ್ಷಿಸಿದಾಗ ಅವರ ಎಡ ಕೈಯಲ್ಲಿ ಊತದ ಗಾಯ ಆಗಿದ್ದು ಕಂಡು ಬಂತು. ನನ್ನ ಅಭಿಪ್ರಾಯದಂತೆ ಹನೀಫ್ ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿತ್ತು.

ನಾನು ಮೇಲೆ ತಿಳಿಸಿದ ವ್ಯಕ್ತಿಗಳನ್ನು ಪರೀಕ್ಷಿಸಿದ ಸಂಬಂಧ ಪೊಲೀಸರಿಗೆ ಗಾಯದ ಪ್ರಮಾಣಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣಪತ್ರಗಳನ್ನು ಹಾಗೂ ಅದರಲ್ಲಿನ ಸಹಿಗಳನ್ನು ಗುರುತಿಸಿದ್ದು ಸದರಿ ಗಾಯದ ಪ್ರಮಾಣಪತ್ರಗಳನ್ನು ಕ್ರಮವಾಗಿ ನಿ.ಪಿ.4 ರಿಂದ ನಿ.ಪಿ.6 ಎಂದು ಹಾಗೂ ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿ.ಪಿ.4(ಎ) , ನಿ.ಪಿ.5(ಎ) ಹಾಗೂ ನಿ.ಪಿ.6(ಎ) ಎಂದು ಗುರುತಿಸಲಾಯಿತು. ಹನೀಫ್ ಮತ್ತು ಜಯರಾಮ ರೈ ಗಳಿಗೆ ಆದ ಗಾಯಗಳು ಕೈಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆಗಳು ಇರುತ್ತದೆ.

ಪಾಟೀ ಸವಾಲು:ಆರೋಪಿ ಪರ ಶ್ರೀ ಹೆಚ್.ಪಿ.ಆರ್. ವಕೀಲರಿಂದ:

ನಾನು ಪರೀಕ್ಷಿಸಿದ ಗಾಯಾಳುಗಳು ಚಿಕಿತ್ಸೆಗಾಗಿ ತಡವಾಗಿ ಬಂದ ಕಾರಣವನ್ನು ನನಗೆ ತಿಳಿಸಿಲ್ಲ. ಹನೀಫ್ ಮತ್ತು ಜಯರಾಮ ರೈ ಗಳಿಗೆ ಆದ ಗಾಯಗಳು ಒಬ್ಬ ವ್ಯಕ್ತಿ ಕೆಲಸ ಮಾಡುವಾಗ ಅಥವಾ ವಾಹನ ಚಾಲನೆ ಮಾಡುವಾಗ ಅಕಸ್ಮಾತ್ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ. ಗಾಯದ ಪ್ರಮಾಣಪತ್ರದಲ್ಲಿ ಆದ ಗಾಯಗಳ ವಯಸ್ಸನ್ನು ನಮೂದಿಸಿಲ್ಲ. ಗಾಯಾಳುಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಪೊಲೀಸರಿಗೆ ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 7**

PW : 7